ಶ್ರೀ ಕೆ. ಹೆಚ್. ರಂಗನಾಥ್—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ ಪುಸ್ತಕಗಳು ಸಿಕ್ಕುತ್ತಿಲ್ಲವೆಂದು ಹೇಳುವುದು ಸರಿಯಲ್ಲ, ಪ್ರತಿ ಎರಡುದಿವಸಗಳಿಗೆ ಒಮ್ಮೆ ನಾನು ಇನ್‌ಫರ್ ಮೇಷನ್‌ನ್ನು ತರಿಸಿಕೊಳ್ಳುತ್ತಿದ್ದೇನೆ. ಇಲ್ಲಿಂದ ಎಷ್ಟು ಪುಸ್ತಕಗಳು ಹೋಗುತ್ತಿವೆ ಎಷ್ಟು ಪುಸ್ತಕಗಳು ವಿತರಣೆಯಾಗಿವೆ ಎಂಬುದರ ಬಗ್ಗೆ ಪ್ರತಿ ಡಿ.ಡಿ.ಪಿ.ಐ.ರವರಿಂದ ಇನ್‌ಫರ್‌ಮೇಷನ್ ಅನ್ನು ತರಿಸಿ ಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರು ಎತ್ತಿರುವ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಈಗ ನನ್ನ ಗಮನಕ್ಕೆ ತಂದಿರುತ್ತಾರೆ. ಅದನ್ನು ವಿಚಾರ ಮಾಡುತ್ತೇನೆ. ಇನ್ನು ಕಳ್ಳ ವ್ಯಾಪಾರವನ್ನು ಪುಸ್ತಕ ಗಳನ್ನು ಬಚ್ಚಿಟ್ಟು ಮಾಡುತ್ತಿದ್ದಾರೆಂಬ ವಿಚಾರವನ್ನು ಹೇಳಿರುತ್ತಾರೆ, ಅದನ್ನು ವಿಚಾರ ಮಾಡುತ್ತೇನೆ

ಗಮನ ಸೆಳೆಯುವ ಸೂಚನೆಗಳು

ರಾಜ್ಯದಲ್ಲಿ ರೈತರ ಸಾಲ ಮನ್ನಾದ ವಿಚಾರದಿಂದಾಗಿ ಸರ್ಕಾರ ಸಂಘಗಳಿಂದ ಗೊಬ್ಬರದ ವಿತರಣೆ ಸ್ಥಗಿತ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ,, ನಾನು ಈಗಾಗಲೇ ೨-೩ ಬಾರಿ ತಮ್ಮ ಮೂಲಕ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಈಗ ಈ ಪಟ್ಟಿಯಲ್ಲಿ ಬಂದಿರತಕ್ಕಂಥದ್ದನ್ನು ಗಮನ ಸೆಳೆಯಲೋ ಅಥವಾ.....

ಅಧ್ಯಕ್ಷರು.—ತಮಗೆ ಇಷ್ಟಬಂದುದನ್ನು ಗಮನ ಸೆಳೆದು ಮುಗಿಸಿ. ಇದನ್ನೇ ಇಲ್ಲಿ ಚರ್ಚೆ ಮಾಡುತ್ತಾ ಕೂಳಿತುಕೊಳ್ಳಲು ಸಾಧ್ಯವಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಷ್ಟು ಚರ್ಚೆ ಮಾಡಿದರೂ ಸಚಿವ ಅಧಿಕಾರಿಗಳು ಎಷ್ಟು ನಿರ್ಲಕ್ಷ್ಯ ವಹಿಸಿದ್ದಾರೆ ಎನ್ನುವ ಬಗ್ಗೆ ತಮ್ಮ ಗಮನ ಸೆಳೆಯಬಯಸುತ್ತೇನೆ.

MR. SPEAKER.—When you have nothing to say. I will have to call the next Member.

ಶ್ರೀ ಎಲ್. ಆರ್. ಶಿವರಾಮೇ ಗೌಡ.—ಮಾನ್ಯ ಅಧ್ಯಕ್ಷರೇ ರಾಜ್ಯದ ಸಹಕಾರಿ ಸಂಘಗಳಿಂದ ಗೊಬ್ಬರ ಹಾಗೂ ಪಡಿತರ ವ್ಯವಸ್ಥೆಗಳ ವಿತರಣೆ ಸರಿಯಾಗಿ ಆಗುತ್ತಿಲ್ಲ. ರಾಜ್ಯದಲ್ಲಿ ಸಾಲ ಮನ್ನಾ ವಿಚಾರ ಇತ್ತೀಚೆಗೆ ಪ್ರಸ್ತಾಪದಲ್ಲಿರುವುದರಿಂದ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಇದ್ದ ದುಡ್ಡಿನ ಬಂಡವಾಳ ಏನಿತ್ತೋ ಆ ಹಣವನ್ನು ಬ್ಯಾಂಕಿನವರು ತೆಗೆದುಕೊಂಡು ಬಂದಿರುತ್ತಾರೆ. ಆದ್ದರಿಂದ ಮೇಲ್ಕಂಡ ವ್ಯವಸಾಯ ಸಹಕಾರ ಸಂಘಗಳು ದುಡ್ಡಿನ ಬಂಡವಾಳವಿಲ್ಲದೆ ಗೊಬ್ಬರ ಮತ್ತು ಪಡಿತರ ವಸ್ತುಗಳನ್ನು ತಂದು ಮಾರಾಟ ಮಾಡುತ್ತಿಲ್ಲ. ಆದ್ದರಿಂದ ರೈತರು ಇಂದಿನ ಪರಿಸ್ಥಿತಿಯಲ್ಲಿ ಗೊಬ್ಬರವನ್ನು ಕಾಳಸಂತೆಯಲ್ಲಿ ೨೫ ರೂಪಾಯಿನಿಂದ ಹಿಡಿದು ೧೦೦ ರೂಪಾಯಿಗಳ ವರೆಗೆ ಒಂದು ಮೂಟೆಗೆ ಚಾಪ್ತಿ ಕೊಟ್ಟು ತೆಗೆದುಕೊಂಡು ಬರತಕ್ಕಂಥ ಪರಿಸ್ಥಿತಿ ಬಂದಿರುವುದರಿಂದ ಸಹಕಾರಿ ಸಂಸ್ಥೆಗಳ ಗಮನವನ್ನು ತಮ್ಮ ಮೂಲಕ ಸೆಳೆಯುತ್ತಿದ್ದೇನೆ.

ಡಾ: ಹೆಚ್. ಆರ್. ರಾಜು (ಸಹಕಾರ ರಾಜ್ಯ ಸಚಿವರು),—ಮಾನ್ಯ ಅಧ್ಯಕ್ಷರೇ, ಶ್ರೀ ಎಲ್. ಆರ್. ಶಿವರಾಮೇಗೌಡರು ಸಹಕಾರಿ ಸಂಸ್ಥೆಗಳು ನಡೆಸುತ್ತಿರುವ ನ್ಯಾಯಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತಗೊಂಡಿದ್ದು ರೈತರಿಗೆ ತೊಂದರೆಯಾಗಿ ಸಹಕಾರಿ ಸಂಸ್ಥೆಗಳಿಗೆ ರೈತರಿಂದ ಬರಬೇಕಾಗಿದ್ದ ಸಾಲ ವಸೂಲಾತಿ ನಿಂತಿರುವುದರಿಂದ ಸಂಸ್ಥೆಯಲ್ಲಿ (ಸಹಕಾರಿ ದುಡ್ಡಿನ ಬಂಡವಾಳ ಇಲ್ಲದಿರುವುದರಿಂದ ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳಿಂದ ವಿತರಣೆಯಾಗುತ್ತಿದ್ದ ಗೊಬ್ಬರ, ಮತ್ತು ಪಡಿತರ ವ್ಯವಸ್ಥೆ ಸ್ಥಗಿತಗೊಂಡಿದ್ದು ಸರ್ಕಾರ ಈ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಲು ಸರ್ಕಾರದ ಗಮನ ಸೆಳೆದಿದ್ದಾರೆ.

ಸಹಕಾರಿ ಸಂಸ್ಥೆಗಳು ನಡೆಸುತ್ತಿರುವ ನ್ಯಾಯ ಬೆಲೆ ಅಂಗಡಿಗಳು ಮತ್ತು ಗೊಬ್ಬರದ ವಿತರಣೆ ಸ್ಥಗಿತಗೊಂಡಿದ್ದು ರೈತರಿಗೆ ತೊಂದರೆ ಆಗಿದೆ ಎನ್ನುವುದು ಸರಿಯಲ್ಲ. ಏಕೆಂದರೆ ರಾಜ್ಯದಲ್ಲಿ ಜೂನ್ ತಿಂಗಳ ಕೊನೆಯವರೆಗೆ ಸುಮಾರು ರೂ. ೨೮೯.೯೦ ಕೋಟಿಗಳ ಬೆಳೆ ಸಾಲ ವಿತರಣೆ ಮಾಡಲಾಗಿದೆ. ಇದರಲ್ಲಿ 'ಬ' ಘಟಕವು ಸೇರಿದ್ದು ಗೊಬ್ಬರವನ್ನು ಕೂಡ ಹುಚಲಾಗಿದೆ. ಅದು ಸುಮಾರು ಶೇಕಡ ೫೦ ರಿಂದ ೬೦ ರಷ್ಟಿದೆ. ಸಹಕಾರಿ ಸಂಸ್ಥೆಗಳಿಗೆ ರೈತರಿಂದ ಬರಬೇಕಾಗಿದ್ದ ಸಾಲ ವಸೂಲಾತಿ ಸಂಪೂರ್ಣ ವಾಗಿ ನಿಂತಿರುವುದಿಲ್ಲ. ಮೇ ತಿಂಗಳ ಕೊನೆಗೆ ಇದ್ದ ಹಾಗೆ ರಾಜ್ಯದಲ್ಲಿ ಶೇ. ೧೪ ರಿಂದ ೫೦ ರಷ್ಟು ಬೆಳೆ ಸಾಲ ವಸೂಲಾತಿ ಆಗಿರುತ್ತದೆ. ಆದ್ದರಿಂದ ಸಾಲ ವಸೂಲಾತಿ ಮತ್ತು ಗೊಬ್ಬರ ವಿತರಣೆ ಕಳೆದ ವರ್ಷಕ್ಕೆ

ಹೋಲಿಸಿದಾಗ ಕಡಿಮೆ ಪ್ರಮಾಣದಲ್ಲಿ ಆಗಿರಬಹುದೇ ವಿನಹ ಪೂರ್ಣ ಸ್ಥಗಿತಗೊಂಡಿರುವುದಿಲ್ಲ. ಸಾಲ ವಸೂಲಾತಿ ಈ ವರ್ಷ ನಿರೀಕ್ಷಿತ ಮಟ್ಟದಲ್ಲಿ ಆಗದೇ ಇರುವುದರಿಂದ ಸಹಕಾರಿ ಸಂಸ್ಥೆಗಳಲ್ಲಿ ದುಡಿಮೆ ಬಂಡವಾಳದ ಪ್ರಮಾಣ ಕಡಿಮೆಯಾಗಿ ತೊಂದರೆಯಾಗಿರಬಹುದು. ಇದರಿಂದ ಗೊಬ್ಬರ ಮತ್ತು ಪಡಿತರ ವ್ಯವಸ್ಥೆಗೆ ತೊಂದರೆಯಾಗಿರಬಹುದಂ. ಆದರೆ ಸ್ಥಗಿತಗೊಂಡಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ರೀತಿಯ ದೂರು ಬಂದಿರುವುದಿಲ್ಲ. ಆದಾಗ್ಯೂ ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

† ಶ್ರೀ ಎಲ್. ಆರ್. ಶಿವರಾಮೇಗೌಡ —ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ಸಹಕಾರಿ ಸಂಸ್ಥೆಗಳಲ್ಲಿ ನಡೆಸುತ್ತಿರುವ ಗೊಬ್ಬರದ ವಿತರಣೆ ಚೆನ್ನಾಗಿದೆ ಎಂದು ಮಾನ್ಯ ಸಚಿವರು ಮೇಲೆ ಹೇಳಿದ್ದಾರೆ ಆದೇ ಭಾಗದಲ್ಲಿ ಕೆಳಗೆ ಕಡಿಮೆಯಾಗಿರಬಹುದೆಂದು ಶಂಕೆಯನ್ನು ಸಹಿತ ವ್ಯಕ್ತಮಾಡಿದ್ದಾರೆ. ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ವ್ಯವಸಾಯ ಸೇವಾ ಸಹಕಾರಿ ಸಂಘಗಳು ಏನಿವೆಯೋ, ಆ ಸಂಘಗಳ ಮೂಲಕ ಗೊಬ್ಬರ ವಿತರಣೆ ಮಾಡಲು ಅವರ ಹತ್ತಿರ ದುಡ್ಡಿಲ್ಲ, ಅವರು ಗೊಬ್ಬರವನ್ನು ತಂದು ವ್ಯಾಪಾರ ಮಾಡಲಿಕ್ಕೆ ಅವರ ಹತ್ತಿರ ದುಡಿವೆ ಬಂಡವಾಳವಿಲ್ಲವೆನ್ನುವ ವಿಚಾರ ಸಾಕಷ್ಟು ಸಹಕಾರ ಸಂಘಗಳ ಬಗ್ಗೆ ಪ್ರಸ್ತಾಪಕ್ಕೆ ಬಂದಮೇಲೆ ಪ್ರತ್ಯೇಕವಾಗಿ ವಿಚಾರ ಮಾಡಿ ನೋಡಿದ್ದೇವೆ. ಈ ರಾಜ್ಯದಲ್ಲಿ ಬಹಳಷ್ಟು ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಇವತ್ತು ಹಣವಿಲ್ಲದೆ ಗೊಬ್ಬರ ವಿತರಣೆ ಯಾಗದೆ ಕಾಳಸಂತೆಯಲ್ಲಿ ರೈತರು ತೆಗೆದುಕೊಳ್ಳುತ್ತಿದ್ದಾರೆ. ಆದರೂ ಸಹಿತ ಈ ವರದಿ ಏನು ಇದೆ. ಈ ಬಗ್ಗೆ ಅಧಿಕಾರಿಗಳು ತಮ್ಮನ್ನು ತಪ್ಪುದಾರಿಗೆ ಎಳೆದಿದ್ದಾರೆಂದು ಹೇಳಿದರೆ ತಪ್ಪಾಗಲಾರದೆಂದು ನಾನಾದರೂ ಭಾವಿಸಿದ್ದೇನೆ. ಬಹಳಷ್ಟು ಕಡಿಮೆಯಾಗಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ೫-೧೦ ಪರ್ಸೆಂಟ್ ಡಿಫರೆನ್ಸ್ ಬಂದು ವ್ಯಾಪಾರ ಮಾಡುತ್ತಿದ್ದರೆ ಪರವಾಗಿಲ್ಲ. ಆದರೆ ಬಹಳಷ್ಟು ವ್ಯವಸಾಯ ಸೇವಾ ಸಹಕಾರಿ ಸಂಘಗಳು ಬಾಗಿಲನ್ನೇ ತೆಗೆದಿಲ್ಲವಾದ್ದರಿಂದ ಇವತ್ತು ರೈತರು ಕಂಗಾಲಾಗಿದ್ದಾರೆ. ರೈತರು ಸಾಲ ಕಟ್ಟಬೇಕೇ ಬಿಡಬೇಕೇ ಎಂಬ ಸಂದರ್ಭದಲ್ಲಿ ಅವರಿಗೆ ಎಷ್ಟರಮಟ್ಟಿಗೆ ಪೆಟ್ಟು ಬೀಳುತ್ತಿದೆ ಎಂದರೆ ಒಂದು ಮೂಟೆ ಗೊಬ್ಬರಕ್ಕೆ ೫-೧೦ ರೂಪಾಯಿ ಹೆಚ್ಚಿಗೆ ಕೊಟ್ಟು ಏಜೆಂಟರ ಮೂಲಕ ಕಾಳ ಸಂತೆಯಲ್ಲಿ ಪಡೆಯಬೇಕಾಗಿದೆ. ತಾವು ಡಿಸಿಸಿ ಬ್ಯಾಂಕ್ ಅಥವಾ ಸರ್ಕಾರದ ವತಿಯಿಂದ ವ್ಯವಸಾಯ ಸೇವಾ ಸಹಕಾರ ಕೇಂದ್ರಗಳಿಗೆ ಅವುಗಳ ಅರ್ಹತೆ ಮೇಲೆ ಒಂದು ಲಕ್ಷ ಎರಡು ಲಕ್ಷ ಹೀಗೆ ಹಣ ಬಿಡುಗಡೆ ಮಾಡಿ ರೈತರಿಗೆ ಗೊಬ್ಬರ ಒದಗಿಸತಕ್ಕ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ತಮ್ಮ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಇವರಿಗೆ ಆಹಾರ ಧಾನ್ಯಗಳ ಸಬ್ಸಿಡಿ ಏನಿದೆ. ಅದನ್ನು ಕೊಡುತ್ತಿಲ್ಲ. ಇಂಟರೆಸ್ಟ್ ಸಬ್ಸಿಡಿಯನ್ನು ಸಹಕಾರ ಸಂಘಗಳಿಗೆ ಕೊಡುತ್ತಿಲ್ಲ. ಇದನ್ನೆಲ್ಲ ಕೊಟ್ಟರೆ ಅವರಲ್ಲಿ ದುಡ್ಡು ಇರುತ್ತದೆ.

ಶ್ರೀ ಹೆಚ್. ಆರ್. ರಾಜು —ಇದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಷಯ ಸಾಲದ ನೀತಿ ಯಿಂದ ಎಲ್ಲಾ ಸಹಕಾರ ಸಂಘಗಳು ಯಾವ ರೀತಿ ಇವೆ ಎಂದು ಎಲ್ಲರಿಗೂ ಗೊತ್ತಿದೆ. ಯಾವ ಸಹಕಾರ ಸಂಸ್ಥೆಗಳು ಗೊಬ್ಬರವನ್ನು ಲಿಫ್ಟ್ ಮಾಡುತ್ತಿಲ್ಲ ಅವುಗಳಿಗೆ ಹಣಕಾಸಿನ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರ ಬಗ್ಗೆ ಸರ್ಕಾರ ಗಮನ ಹರಿಸುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ —ನೀವು ಹಣ ಬಿಡುಗಡೆ ಮಾಡುವ ಹೊತ್ತಿಗೆ ಬಿತ್ತನೆ ಮುಗಿಯುತ್ತದೆ. ಇದು ಇಡೀ ರಾಜ್ಯದ ರೈತರ ಪ್ರಶ್ನೆ. ನೇರವಾಗಿ ಏನು ತೀರ್ಮಾನ ಕೈಗೊಳ್ಳುತ್ತೀರಿ ಎಂಬುದನ್ನು ಸದನದಲ್ಲಿ ಹೇಳಬೇಕು. ಗಮನ ಸೆಳೆಯುವ ಸೂಚನೆ ನಿಮ್ಮ ಹತ್ತಿರ ಬಂದು ಒಂದೂವರೆ ತಿಂಗಳಾಯಿತು. ಇದರ ಬಗ್ಗೆ ಸರ್ಕಾರ ಖಡಾಖಂಡಿತವಾಗಿ ತಾವು ಉತ್ತರಿಸಬೇಕು.

ಅಧ್ಯಕ್ಷರು.—ಖಡಾಖಂಡಿತವಾಗಿ ಏನಾದರೂ ಹೇಳಿ.

ಶ್ರೀ ಹೆಚ್ ಆರ್. ರಾಜು.—ಕೆಲವು ಸಂಸ್ಥೆಗಳು ಒಂದು ರೀತಿಯ ಲೋನ್ ಫೆಸಿಲಿಟೀಸ್ ಅನ್ನು ಒದಗಿಸುತ್ತವೆ. ಕೆಲವಕ್ಕೆ ಒದಗಿಸುವ ಶಕ್ತಿ ಇಲ್ಲ. ಯಾವ ರೀತಿ ಪರಿಹಾರ ಮಾಡಬೇಕೆಂದು ಮಾನ್ಯ ಸದಸ್ಯರನ್ನೇ ಕೇಳಬೇಕಾಗಿದೆ. ಏಕೆಂದರೆ ಈಗ ಎಲ್ಲಾ ಸಂಸ್ಥೆಗಳು ತಮಗೆ ಗೊತ್ತಿರುವ ಹಾಗೆ ದುಸ್ಥಿತಿ ಯಲ್ಲಿವೆ. ಆದ್ದರಿಂದ ಅವರೇ ಸಲಹೆ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ನೀವು ಏನು ಮಾಡಬೇಕೆಂದು ಹೇಳುತ್ತೀರಿ? ಸಲಹೆ ಕೊಡಿ.

ಶ್ರೀ ಎಲ್. ಆರ್ ಶಿವರಾಮೇಗೌಡ.—ಮಂತ್ರಿಗಳು ಒಂದು ಅಂಶ ಹೇಳಿದರು. ರಾಜ್ಯದಲ್ಲಿ ಎಲ್ಲಾ ಸಹಕಾರ ಸಂಘಗಳು ನಡೆಯುತ್ತಿಲ್ಲ. ಕೆಲವೇ ನಡೆಯುತ್ತಿರತಕ್ಕವು ತೊಂದರೆಗೀಡಾಗಿರತಕ್ಕ

ಸಂಘಗಳಿಗೆ ಇಂಟರೆಸ್ಟ್ ಸಬ್ಸಿಡಿ ಕೊಟ್ಟು ಡಿಸಿಸಿ ಬ್ಯಾಂಕಿನವರು ಹಣ ಕೊಟ್ಟರೆ ವ್ಯವಸಾಯ ಸೇವಾ ಸಹಕಾರ ಸಂಘಗಳು ಗೊಬ್ಬರವನ್ನು ತಂದು ವಿತರಣೆ ಮಾಡುತ್ತವೆ; ಆದರಿಂದ ರೈತರಿಗೆ ಅನುಕೂಲ ವಾಗುತ್ತದೆ. ಈ ಬಗ್ಗೆ ತಾವು ಭರವಸೆ ಕೊಡಬೇಕು.

ಶ್ರೀ ಹೆಚ್. ಆರ್. ರಾಮು.— ಆ ಬಗ್ಗೆ ತೀವ್ರವಾಗಿ ಪರಿಶೀಲಿಸುತ್ತೇನೆ.

ಶ್ರೀ ಸಿ. ಬೈರೇಗೌಡ.— ಸರ್ಕಾರದಿಂದ ಬರಬೇಕಾದುದನ್ನು ಸಹಕಾರ ಸಂಘಗಳಿಗೆ ಕೊಟ್ಟರೆ ಸಾಕು. ಅದನ್ನಾದರೂ ಮಾಡುತ್ತೇವೆಂದು ಹೇಳಿ.

(ಉತ್ತರವಿಲ್ಲ)

SRI D. B CHANDRE GOWDA.— Sir, I would like to make an appeal to you, first before I draw the attention of the Hon. Minister. Sir, the matter merits discussion and full scale debate as took place in the Upper House. I would request you to please convert it under Rule 68 so that we can discuss in detail, just now; otherwise....

MR. SPEAKER.— Three of you have drawn the attention of the Government. All the three are the senior Members of the Opposition. Does the Minister have anything to say ?

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಯನ್ನು ನಾನು ಗಮನಿಸಿದ್ದೇನೆ. ನಿನ್ನೆ ಸಂಜೆ ಇದು ನನ್ನ ಕೈಗೆ ಬಂತು. ಮೇಲ್ಮನೆಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಚರ್ಚೆ ನಡೆಯುತ್ತಿರುವುದರಿಂದ ಅಲ್ಲಿನ ಸಭೆಗೆ ಹೋಗುವುದಕ್ಕೆ ಮುಂಚಿತವಾಗಿ ಇಲ್ಲಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿರುವುದರಿಂದ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡ ಬೇಕೆಂದು ನಾನು ಬಂದಿದ್ದೇನೆ. ಆವರು ಸರ್ಕಾರದ ಗಮನಸೆಳೆದರೆ ನಾನು ಉತ್ತರಿಸುತ್ತೇನೆ. ಆದಕ್ಕೆ ಬೇಕಾದರೆ ಸ್ಪಷ್ಟೀಕರಣ ನೀಡುವುದಕ್ಕೆ ತಯಾರಿದ್ದೇನೆ.

SRI D. B. CHANDRE GOWDA.— Sir, since he has already replied to this matter in the Upper House, I am making an appeal to convert this to rule 68 for a full scale discussion.

MR. SPEAKER.— Yesterday, we had meeting of the Business Advisory Committee. You know, how tight the schedule of the House is. I am afraid, it will not be possible to find time for this under rule 68. I would request you to just call the attention of the Hon. Minister.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೆ, ಆವರು ಗಮನ ಸೆಳೆಯಲಿ. ನಾನು ಉತ್ತರ ಹೇಳುತ್ತೇನೆ. ನಂತರ ಉದ್ಭವಿಸುವ ವಿಷಯ ತಮಗೆ ಮತ್ತು ಆವರಿಗೆ ಸೇರಿದ್ದುದು.

ಶ್ರೀ ಡಿ. ಬಿ. ಚಂದ್ರೇಗೌಡ.— ನನಗೆ ಕಾಪೀಸ್ ಬಂದಿಲ್ಲ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಕೊಟ್ಟಿದ್ದೇನೆ.

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸರ್ವೆ ನಂಬರ್ ೮೩೯ ರಿಂದ ೮೪೧ರವರೆಗೆ ಭೂ ಸ್ವಾಧೀನ ಹಾಗೂ ನಿವೇಶನಗಳ ವಿತರಣೆ.

SRI D. B. CHANDRE GOWDA.— Sir, I would like to call the attention of the Hon. Minister for Fisheries, Ports, Housing and Urban Development regarding distribution of sites by acquiring land at Survey Nos. 839B, 839C, 841A and 841B by the Bellary Urban Development Authority, Bellary.